ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

**ಸಂಖ್ಯೆ: ಬಿಸಿಯು/ಎಸ್‌ವೈಎನ್–7/ 95 /2019–20** **ದಿನಾಂಕ: 07.03.2020.**

ಗೆ,

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 27.02.2020 ರಂದು ಜರುಗಿದ 7 ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

***

ದಿನಾಂಕ: **27.02.2020** ರಂದು ಪೂರ್ವಾಹ್ನ 11–00 ಗಂಟೆಗೆ ಜರುಗಿದ 7 ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಕುಲಸಚಿವರು 7/3/2020

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. Ambedkar Veedhi, Bengaluru – 560 001.
Ph. No.: 080 – 22131385, E-Mail:registrarbcu@gmail.com /
bcuccb@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್–7/ /2019–20 ದಿನಾಂಕ:.06.03.2020.

ದಿನಾಂಕ 27.02.2020 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 7 ನೇ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎಸ್. ಜಾಫೆಟ್ | ಸಭಾಧ್ಯಕ್ಷರು |
| 2. | ಡಾ: ಎಂ. ಪಾಂಡುರಂಗಪ್ಪ | ಸದಸ್ಯರು |
| 3. | ಡಾ: ಅರವಿಂದ್ ಹೆಚ್.ಟಿ. | ಸದಸ್ಯರು |
| 4. | ಶ್ರೀ. ಹೆಚ್.ಆರ್. ಸತೀಶ್ | ಸದಸ್ಯರು |
| 5. | ಡಾ. ಬಿ.ಎ. ಅನುರಾಧಾ | ಸದಸ್ಯರು |
| 6. | ಡಾ. ಆರ್. ಪಾರ್ವತಿ | ಸದಸ್ಯರು |
| 7. | ಡಾ.ಇ.ಬಿ. ರಾಜೇಶ್ | ಸದಸ್ಯರು |
| 8. | ಶ್ರೀ ಡಿ.ಜಿ. ಶ್ರೀನಿವಾಸಮೂರ್ತಿ | ಸದಸ್ಯರು |
| 9. | ಶ್ರೀ ಕರಣ್‌ಕುಮಾರ್ | ಸದಸ್ಯರು |
| 10. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 11. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 12. | ಡಾ.ಆರ್.ಕೆ. ಚಂದ್ರನಾಥ್ | ಸದಸ್ಯರು |
| 13. | ಶ್ರೀ ಥಾಮಸ್ ನೀಲಿಯಾರ | ಸದಸ್ಯರು |
| 14. | ಡಾ. ವಿ.ಆರ್. ದೇವರಾಜು | ಸದಸ್ಯರು |
| 15. | ಪ್ರೊ:ಬಿ. ರಮೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 16. | ಪ್ರೊ: ವಿ. ಶಿವರಾಂ<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರಿಗೆ ಸ್ವಾಗತ ಕೋರಿದರು. ಕುಲಪತಿಗಳು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಹಾಕಿ ತಂಡ ಅಖಿಲ ಭಾರತ ಮಟ್ಟದ "ಖೇಲೋ ಇಂಡಿಯಾ ವಿಶ್ವವಿದ್ಯಾಲಯಗಳ ಪಂದ್ಯಾಟದಲ್ಲಿ" ಸೆಮಿ ಫೈನಲ್ ಹಂತಕ್ಕೆ ತಲುಪಿರುವ ವಿಷಯವನ್ನು ಸಭೆಯಲ್ಲಿ ಪ್ರಕಟಿಸಿದರು. ಸಭೆ ಹಾಕಿ ತಂಡದ ಸಾಧನೆಗಾಗಿ ಅಭಿನಂದನೆಗಳನ್ನು ಸಲ್ಲಿಸಿ ಸಂತೋಷ ವ್ಯಕ್ತಪಡಿಸಿತು.

ಪ್ರೊ: ಬಿ. ರಮೇಶ್, ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ, ತುಮಕೂರು ವಿಶ್ವವಿದ್ಯಾಲಯ ಇವರು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನ) ಹುದ್ದೆಗೆ ಸರ್ಕಾರದಿಂದ ನೇಮಕಗೊಂಡು ದಿನಾಂಕ: 30.01.2020 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ವಿಷಯವನ್ನು ಸಭೆಗೆ ತಿಳಿಸಿ ಅವರಿಗೆ ಆತ್ಮೀಯವಾದ ಸ್ವಾಗತ ಕೋರಿ ಪರಿಚಯ ಮಾಡಿಕೊಳ್ಳಲು ತಿಳಿಸಿದರು.

ಅದರಂತೆ ಪ್ರೊ: ಬಿ. ರಮೇಶ್ ರವರು ತಾವು ತುಮಕೂರು ವಿಶ್ವವಿದ್ಯಾಲಯದ ವಿವಿಧ ಹುದ್ದೆಗಳಲ್ಲಿ ಸಲ್ಲಿಸಿದ ಸೇವೆ, ಅದಕ್ಕೂ ಪೂರ್ವದಲ್ಲಿ ಕುವೆಂಪು ಹಾಗೂ ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸಿರುವ ಕುರಿತು ಮತ್ತು ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಲ್ಲಿ ಕುಲಸಚಿವರಾಗಿ ಸೇವೆ ಸಲ್ಲಿಸಿರುವ ವಿವರಗಳನ್ನು ಸಭೆಗೆ ತಿಳಿಸಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಹುದ್ದೆಗೆ ನೇಮಕಮಾಡಿದ ಕರ್ನಾಟಕ ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸಿ ಸದಸ್ಯರ ಸಹಕಾರ ಕೋರಿದರು.

ನಂತರ ಕಾರ್ಯ ಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು

| | |
|---|---|
| ವಿಷಯ ಸಂಖ್ಯೆ– 1: | ದಿನಾಂಕ 10.01.2020 ರಂದು ಜರುಗಿದ ಅಸಾಮಾನ್ಯ ಸಭೆಯ ಹಾಗೂ ದಿನಾಂಕ 30.01.2020 ರಂದು ಜರುಗಿದ 6 ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಕುರಿತು.<br><br>ಸಿಂಡಿಕೇಟ್ ನಿರ್ಣಯ:<br>**ದಿನಾಂಕ 10.01.2020 ರಂದು ಜರುಗಿದ ಅಸಾಮಾನ್ಯ ಸಭೆಯ ಹಾಗೂ ದಿನಾಂಕ 30.01.2020 ರಂದು ಜರುಗಿದ 6 ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಧೃಢೀಕರಿಸಲಾಯಿತು.** |

| | |
|---|---|
| ವಿಷಯ ಸಂಖ್ಯೆ- 2: | ದಿನಾಂಕ 10.01.2020 ರಂದು ಜರುಗಿದ ಅಸಾಮಾನ್ಯ ಸಭೆಯ ಮತ್ತು ದಿನಾಂಕ 30.01.2020 ರಂದು ಜರುಗಿದ 6 ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.<br><br>**ಸಿಂಡಿಕೇಟ್ ನಿರ್ಣಯ:** |
| ಅ) | **10.01.2020 ರ ಅಸಾಮಾನ್ಯ ಸಭೆಯ ನಡಾವಳಿಯ ಕೆಳಕಂಡ ವಿಷಯಗಳ ಮೇಲೆ ಕೈಗೊಂಡ ಕ್ರಮದ ವರದಿ ಪರಿಷ್ಕರಿಸಿ ಅನುಮೋದನೆ ನೀಡಲಾಯಿತು.**<br><br>ವಿಷಯ ಸಂಖ್ಯೆ- 2:<br><br>ಸದಸ್ಯರಾದ ಡಾ: ಹೆಚ್.ಟಿ. ಅರವಿಂದ್ ರವರು ಪರೀಕ್ಷಾ ನಿಯಂತ್ರಣ ಕೊಠಡಿಗೆ ಸಿ.ಸಿ.ಟಿ.ವಿ ಹಾಕಿಸುವ ಬಗ್ಗೆ ಮಹಾವಿದ್ಯಾಲಯಗಳಿಗೆ ಸೂಚನೆ ನೀಡಿರುವ ಬಗ್ಗೆ ಮಾಹಿತಿ ಕೋರಿದರು. ಈ ಕುರಿತು ಎಲ್ಲಾ ಮಹಾವಿದ್ಯಾಲಯಗಳು, ಪರೀಕ್ಷಾ ನಿಯಂತ್ರಣ ಕೊಠಡಿಗೆ ಸಿ.ಸಿ.ಟಿ.ವಿ ಅಳವಡಿಸಿಕೊಳ್ಳಬೇಕೆಂದು ಸೂಚಿಸಿ ಸುತ್ತೋಲೆ ಹೊರಡಿಸಲಾಗಿದೆ ಎಂದು ತಿಳಿಸಲಾಯಿತು.<br><br>**ಪರೀಕ್ಷಾ ವಿಭಾಗದ ಸಿ.ಸಿ.ಟಿ.ವಿಗಳನ್ನು ಸರಿಪಡಿಸಿ ಅಗತ್ಯವಾದಲ್ಲಿ ಹೆಚ್ಚುವರಿ ಸಿ.ಸಿ.ಟಿ.ವಿಗಳನ್ನು ಅಳವಡಿಸಲು ಸೂಚಿಸಲಾಯಿತು.**<br><br>**ಮಹಾವಿದ್ಯಾಲಯಗಳ ಪರೀಕ್ಷಾ ಕೊಠಡಿಗಳಿಗೆ ಸಿ.ಸಿ.ಟಿ.ವಿ ಅಳವಡಿಸುವ ಸಾದಕಭಾಧಕಗಳ ಕುರಿತು ಕುಲಸಚಿವರು (ಮೌಲ್ಯಮಾಪನ) ರವರು ಸಿಂಡಿಕೇಟ್ ಸದಸ್ಯರಾಗಿರುವ ಪ್ರಾಂಶುಪಾಲರೊಂದಿಗೆ ಚರ್ಚಿಸಿ ಸೂಕ್ತ ಶಿಫಾರಸ್ಸು ಮಾಡಲು ತೀರ್ಮಾನಿಸಲಾಯಿತು.**<br>ವಿಷಯ ಸಂಖ್ಯೆ – 5:<br>**The Syndicate instructed to re constitute the Committee as per the decision**<br>ವಿಷಯ ಸಂಖ್ಯೆ- 12: ಸದಸ್ಯರಾದ ಡಾ: ಹೆಚ್.ಟಿ. ಅರವಿಂದ್ ರವರು ತಾವು 5 ಹೊಸ ವಿಭಾಗಗಳ ಸಂಯೋಜಕರ ನೇಮಕಾತಿಗಾಗಿ ಸ್ವೀಕರಿಸಲಾದ ಅರ್ಜಿಗಳ ವಿವರ ನೀಡಲು ಕುಲಸಚಿವರಿಗೆ ಇ-ಮೇಲ್ ಕಳಿಸಿದ್ದು ಆ ಕುರಿತು ವಿವರ ಕೋರಿದರು.<br>**ಈ ಹಂತದಲ್ಲಿ ಅರ್ಜಿಸಲ್ಲಿಸಿದ ಅಭ್ಯರ್ಥಿಗಳ ವಿವರ ಒದಗಿಸುವ ಅಗತ್ಯವಿಲ್ಲವೆಂದು ಸಂಯೋಜಕರ ನೇಮಕಾತಿಯ ಅನುಮೋದನೆ ಸಂದರ್ಭದಲ್ಲಿ ಸ್ವೀಕರಿಸಲಾದ ಅರ್ಜಿಗಳ ವಿವರ ಹಾಗೂ ಇತರ ಮಾಹಿತಿ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರ ಸಲಹೆಗೆ ಸಭೆ ಸಹಮತ ವ್ಯಕ್ತಪಡಿಸಿತು.** |

| | |
|---|---|
| | ಕೆಲವು ಸದಸ್ಯರು ಸಂಯೋಜಕರ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ ಹಾಗೂ ಅನುಭವದ ಕುರಿತು ಮಾಹಿತಿ ಕೋರಿದರು. ಅದಲ್ಲದೆ Technology ಸ್ನಾತಕೋತ್ತರ ವ್ಯಾಸಂಗ ಕುರಿತು ವಿವರಣೆ ಬಯಸಿದರು. ಕುಲಪತಿಗಳು ತಾವು ಯು.ಜಿ.ಸಿ ಕಛೇರಿಗೆ ಭೇಟಿ ನೀಡಿ ಪಡೆದಿರುವ ವಿವರಗಳನ್ನು ಸಭೆಗೆ ವಿವರಿಸಿದರು. Technology ವ್ಯಾಸಂಗ ಇಂಜಿನಿಯರಿಂಗೇತರ ವ್ಯಾಸಂಗವೆಂದು ತಿಳಿಸಿದರು. ಸಂಯೋಜಕರ ಆಯ್ಕೆಗಾಗಿ ರಚಿಸ ಬೇಕಾದ ಸಮಿತಿಗಳ ವಿವರಣೆ ನೀಡಿದರು.<br><br>ಸದಸ್ಯರಾದ ಡಾ.ಆರ್.ಕೆ. ಚಂದ್ರನಾಥ್, ಡಾ. ಬಿ.ಎ. ಅನುರಾಧಾ, ಡಾ. ಆರ್. ಪಾರ್ವತಿ, ಶ್ರೀ ಕರಣ್‌ಕುಮಾರ್, ಡಾ. ಇ.ಬಿ.ರಾಜೇಶ್ ಮುಂತಾದವರು ಚರ್ಚೆಯಲ್ಲಿ ಪಾಲ್ಗೊಂಡು, ಈಗ ಸಭೆಯ ಮುಂದೆ ಹಿಂದಿನ ಸಿಂಡಿಕೇಟ್ ಸಭೆಯ ತೀರ್ಮಾನದ ಮೇಲೆ ಕೈಗೊಂಡ ವರದಿ ಕುರಿತಾಗಿದ್ದು, ಸಧ್ಯ ಈ ವರದಿಯನ್ನು ಒಪ್ಪಿಕೊಳ್ಳ ಬೇಕೆಂದು ತಿಳಿಸಿದರು.<br><br>**ಅದರಂತೆ, ಮೇಲಿನ ಸೂಚನೆಯೊಂದಿಗೆ ದಿನಾಂಕ 10.01.2020 ರ ಅಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮದ ವರದಿಗೆ ಅನುಮೋದನೆ ನೀಡಲಾಯಿತು.**<br><br>**ಸಿಂಡಿಕೇಟ್ ನಿರ್ಣಯ:** |
| ಆ) | **30.01.2020 ರ 6 ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಯ ಕೆಳಕಂಡ ವಿಷಯಗಳ ಮೇಲೆ ಕೈಗೊಂಡ ಕ್ರಮದ ವರದಿ ಪರಿಷ್ಕರಿಸಿ ಅನುಮೋದನೆ ನೀಡಲಾಯಿತು.**<br><br>**ವಿಷಯ ಸಂಖ್ಯೆ– 2(7):** ಹಿಂದಿನ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಸಂಚಿತ ವೇತನದ ಸಿಬ್ಬಂದಿಗಳನ್ನು ವಿಶ್ವವಿದ್ಯಾಲಯದಲ್ಲಿ ಮುಂದುವರೆಸುವ ಕುರಿತು ದಿನಾಂಕ 20.02.2020 ರಂದು ಜರುಗಿದ ಹಣಕಾಸು ಸಮಿತಿಯಲ್ಲಿ ಚರ್ಚಿಸಲಾಗಿದೆ. ಸಂಚಿತ ವೇತನದ ಸಿಬ್ಬಂದಿಗಳನ್ನು KTPP ಕಾಯ್ದೆಯ ಪ್ರಕಾರ ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳ ಬೇಕೆಂದು ಹಣಕಾಸು ಸಮಿತಿ ಶಿಫಾರಸ್ಸು ಮಾಡಿರುವುದರಿಂದ, KTPP ಕಾಯ್ದೆಯ ಪ್ರಕಾರ ಹೊರಗುತ್ತಿಗೆ ಆಧಾರದ ಮೇಲೆ ಸಂಚಿತ ವೇತನದ ಸಿಬ್ಬಂದಿಗಳನ್ನು ಸೇವೆ ಪಡೆಯಲು ಕ್ರಮ ವಹಿಸಲಾಗುವುದು ಎಂದು ಕುಲಪತಿಗಳು ತಿಳಿಸಿ, ಸದರಿ ಸಿಬ್ಬಂದಿಯನ್ನು ಮುಂದಿನ 3 ತಿಂಗಳ ಅವಧಿಗೆ ಮುಂದುವರೆಸಲು ಸಿಂಡಿಕೇಟ್ ಸಭೆಯ ಅನುಮೋದನೆ ಕೋರಿದರು. |

| | |
|---|---|
| | ಹೊರಗುತ್ತಿಗೆ ಪ್ರಕ್ರಿಯೆ ಮುಗಿಸುವವರೆಗೆ ದಿನಾಂಕ 01.03.2020 ರಿಂದ 3 ತಿಂಗಳ ಅವಧಿಗೆ ಸಂಚಿತ ವೇತನದ ಸಿಬ್ಬಂದಿಗಳ ಸೇವೆಯನ್ನು ಮುಂದುವರೆಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.<br><br>**ವಿಷಯ ಸಂಖ್ಯೆ– 2(15):** ಯುಜಿಸಿ ಕಾಯ್ದೆಯ 12(ಬಿ) ಅಡಿಯಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಯುಜಿಸಿ ಪರಿವೀಕ್ಷಣಾ ಸಮಿತಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ ಎಂದು ಕುಲಪತಿಗಳು ಸಭೆಗೆ ತಿಳಿಸಿದರು. ಇದಕ್ಕೆ ಪೂರಕವಾಗಿ ಬೋಧಕ ಸಿಬ್ಬಂದಿಗಳ ನೇಮಕಾತಿಗೆ ಸಂಬಂಧಿಸಿದ ಪರಿನಿಯಮಗಳನ್ನು ರಚಿಸಿ ಸರ್ಕಾರಕ್ಕೆ ಸಲ್ಲಿಸುವ ಕ್ರಮ ಚುರುಕುಗೊಳಿಸ ಬೇಕಾಗುತ್ತದೆ. ಕಾರಣ ಪರಿನಿಯಮ ರಚನಾ ಸಮಿತಿ ಬೇಗನೆ ಸಭೆ ಸೇರಿ ಅಂತಿಮ ಕರಡು ಪರಿನಿಯಮಗಳನ್ನು ಸಿದ್ಧಪಡಿಸ ಬೇಕೆಂದು ತಿಳಿಸಿದರು. ಕುಲಸಚಿವರು(ಮೌಲ್ಯಮಾಪನ) ರವರನ್ನು ಪರಿನಿಯಮಾವಳಿ ರಚನಾ ಸಮಿತಿಯ ಸದಸ್ಯರಾಗಿ ನೇಮಕಮಾಡಲು ಸಭೆಯ ಅಭ್ಯಂತರವಿಲ್ಲ ವೆಂದು ತಿಳಿಸಿ ಇದಕ್ಕಾಗಿ ಪ್ರತ್ಯೇಕವಾಗಿ ವಿಷಯವನ್ನು ಮಂಡಿಸಬೇಕೆಂದು ಸದಸ್ಯರ ಸಲಹೆಗೆ ಸಭೆ ಅನುಮೋದನೆ ನೀಡಿತು. |
| ವಿಷಯ ಸಂಖ್ಯೆ– 3: | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಪರೀಕ್ಷಾ ವಿಭಾಗದ ಸೇವೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ ಕರೆದಿರುವ ಟೆಂಡರಿಗೆ ಸಂಬಂಧಿಸಿದ ದಾಖಲೆಗಳನ್ನು ಸಿಂಡಿಕೇಟ್ ಮುಂದೆ ಮಂಡಿಸುವ ಬಗ್ಗೆ.<br><br>ಈ ವಿಷಯ ಕುರಿತು ಚರ್ಚಿಸಲು ವಿಶೇಷ ಸಭೆ ಕರೆಯ ಬೇಕೆಂದು ಕೋರಿ 9 ಜನ ಸಿಂಡಿಕೇಟ್ ಸದಸ್ಯರು ಕುಲಪತಿಗಳಿಗೆ ಮನವಿ ಪತ್ರ ಸಲ್ಲಿಸಿದ ಕಾರಣ ಚರ್ಚೆಗೆ ತೆಗೆದುಕೊಂಡಿರುವುದಿಲ್ಲ. |
| ವಿಷಯ ಸಂಖ್ಯೆ– 4: | ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಸಂಬಂಧದಲ್ಲಿ ಅಂಕಪಟ್ಟಿಗಳನ್ನು ದ್ವಿಭಾಷೆಯಲ್ಲಿ (ಆಂಗ್ಲ ಮತ್ತು ಕನ್ನಡ) ವಿತರಿಸುವ ಕುರಿತು.<br><br>**ಸಿಂಡಿಕೇಟ್ ನಿರ್ಣಯ:**<br><br>**ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಅಂಕ ಪಟ್ಟಿಗಳನ್ನು ಮುದ್ರಿಸಿ ವಿತರಿಸಬೇಕೆಂಬ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಶಿಫಾರಸ್ಸನ್ನು ಅನುಷ್ಠಾನಗೊಳಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.** |

| | |
|---|---|
| ವಿಷಯ ಸಂಖ್ಯೆ– 5: | Proceedings of the 3rd Works Committee meeting held on 06.02.2020.<br><br>ಸದಸ್ಯರಾದ ಶ್ರೀ. ಹೆಚ್.ಆರ್. ಸತೀಶ್ ರವರು ಕಾಮಗಾರಿ ಸಮಿತಿ ರಚನೆ ಹಾಗೂ 2ನೇ ಕಾಮಗಾರಿ ಸಮಿತಿ ಸಭೆಯ ಕಾರ್ಯಸೂಚಿಯ ವಿವರಗಳನ್ನು ನೀಡಿ, ದಿನಾಂಕ 05.02.2020 ರಂದು ಜರುಗಿದ 3ನೇ ಕಾಮಗಾರಿ ಸಮಿತಿಯ ಕಾರ್ಯಸೂಚಿಯಲ್ಲಿ "Compliance Report of the 2nd Works Committee meeting held on 20.02.2019" ಅಡಿಯಲ್ಲಿ ಒಟ್ಟು 8 ಕಾಮಗಾರಿಗಳನ್ನು ನಮೂದಿಸಲಾಗಿದೆ. ಆದರೆ, ದಿನಾಂಕ 20.05.2019 ರಂದು ಜರುಗಿದ 2ನೇ ಕಾಮಗಾರಿ ಸಮಿತಿ ಕಾರ್ಯಸೂಚಿಯಲ್ಲಿ ಕೇವಲ 2 ವಿಷಯಗಳು ಮಾತ್ರ ಇದ್ದು, 3ನೇ ಸಭೆಯಲ್ಲಿ Compliance Report ಅಡಿಯಲ್ಲಿ 8 ವಿಷಯಗಳನ್ನು ಮಂಡಿಸಲಾಗಿದೆ ಎಂದು ತಿಳಿಸಿದರು. 3ನೇ ಕಾಮಗಾರಿ ಸಭೆ ಜರುಗಿದ ದಿವಸ ವಿಶ್ವವಿದ್ಯಾಲಯಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳು ಭೇಟಿ ನೀಡುವ ಕಾರ್ಯಕ್ರಮವಿದ್ದುದರಿಂದ, ಕುಲಪತಿಗಳು ಕೆಲವು ಸಮಯ ಸಭೆಯ ಅಧ್ಯಕ್ಷತೆ ವಹಿಸಿ ನಂತರ ಲೋಕೋಪಯೋಗಿ ಇಲಾಖೆಯ ಮುಖ್ಯ ಅಭಿಯಂತರಿಗೆ ಅಧ್ಯಕ್ಷತೆ ವಹಿಸಲು ತಿಳಿಸಿ ಹೋದರು. ಹೀಗಾಗಿ ಹೆಚ್ಚಿನ ವಿವರಗಳನ್ನು ಪಡೆಯಲು ಸಾಧ್ಯವಾಗಲಿಲ್ಲ. ಕಾರ್ಯಸೂಚಿಯಲ್ಲಿ 7 ಕಾಮಗಾರಿಗಳನ್ನು ನಿರ್ವಹಿಸಿ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ. ಕಾಮಗಾರಿ ಸಮಿತಿಯ ಸಭೆಯನ್ನು ಕರೆದು ಈ ಕಾಮಗಾರಿಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಅನುಮೋದನೆ ಪಡೆಯ ಬಹುದಾಗಿತ್ತು. ಟೆಂಡರ್ ಕರೆದು ಕೆಲಸ ನಿರ್ವಹಿಸಿದಲ್ಲಿ ಎಸ್.ಆರ್. ದರಕ್ಕಿಂತ ಕಡಿಮೆ ದರ ಸಲ್ಲಿಸುವ ಸಾಧ್ಯತೆ ಇರುತ್ತದೆ ಎಂದು ಸದಸ್ಯರಾದ ಶ್ರೀ. ಹೆಚ್.ಆರ್. ಸತೀಶ್ ರವರು ತಿಳಿಸಿದರು.<br><br>ಸದಸ್ಯರಾದ ಡಾ: ಹೆಚ್.ಟಿ. ಅರವಿಂದ್, ಡಾ. ಇ.ಬಿ.ರಾಜೇಶ್, ಶ್ರೀಮತಿ ಜ್ಯೋತಿ ವಿಜಯ್ ಮುಂತಾದವರು ಮಾತನಾಡಿ, ವಿಧಿವಿಧಾನಗಳನ್ನು ಪಾಲನೆ ಮಾಡುವುದು ಬಹುಮುಖ್ಯ ಎಂದು ತಿಳಿಸಿದರು. ಸದಸ್ಯರಾದ ಡಾ. ಬಿ.ಎ. ಅನುರಾಧಾ, ರವರು ಕುಲಸಚಿವರು ಹಾಗು ಕುಲಪತಿಗಳು ವಿವಿಧ ಪ್ರಾಧಿಕಾರ ಹಾಗೂ ಸಮಿತಿಗಳ ಸಭೆಗಳನ್ನು ಜರುಗಿಸಬೇಕಾದ ಪೂರ್ವ ನಿರ್ಧಾರಿತ ದಿನಾಂಕಗಳ ವೇಳಾಪಟ್ಟಿ ಸಿದ್ಧಪಡಿಸಿ ಅದರಂತೆ ಕ್ರಮ ಕೈಕೊಳ್ಳಬೇಕೆಂದು ತಿಳಿಸಿದರು. |

| | |
|---|---|
| | ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಚರ್ಚೆಯಲ್ಲಿ ಭಾಗವಹಿಸಿ, ವಿಶ್ವವಿದ್ಯಾಲಯದ ಕಾಮಗಾರಿ ಕೆಲಸಗಳನ್ನು ನಿರ್ವಹಿಸುವಾಗ ಕಾರ್ಯವಿಧಾನಗಳನ್ನು ಅನುಸರಿಸಬೇಕು, ಕಾಮಗಾರಿ ಸಮಿತಿ ಸಭೆಗಳನ್ನು ಕಾಲಕಾಲಕ್ಕೆ ಜರುಗಿಸಬೇಕು, ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಹಾಗೂ ಪೂರಕ ದಾಖಲೆಗಳನ್ನು ಒದಗಿಸಬೇಕು. ಅದಲ್ಲದೆ ಕುಲಪತಿಗಳು ಸಭೆಯ ಅಧ್ಯಕ್ಷತೆ ವಹಿಸಿ, ಸಭೆಯ ಅಂತ್ಯದ ವರೆಗೆ ಉಪಸ್ಥಿತರಿರಬೇಕು. ಅನಿವಾರ್ಯವಾಗಿ ಬೇರೆ ಕಾರ್ಯಕ್ರಮಗಳಿಗೆ ಹೋಗಬೇಕಾದ ಸಂದರ್ಭಗಳಲ್ಲಿ ಸಭೆಯನ್ನು ಮುಂದೂಡಬಹುದು ಎಂದು ತಿಳಿಸಿದರು. ಅಧ್ಯಕ್ಷರು, ಮಂಡಿಸಲಾದ ವಿಷಯಗಳ ಮೇಲೆ ವಿವರಣೆಗಳನ್ನು ನೀಡದೇ ತಮ್ಮ ಅಭಿಪ್ರಾಯ ಮಾತ್ರ ವ್ಯಕ್ತಪಡಿಸಿ ಸಿಂಡಿಕೇಟ್ ತೀರ್ಮಾನವನ್ನು ತಿಳಿಸಬೇಕು. ಆಯಾ ವಿಷಯಗಳನ್ನು ಕುಲಸಚಿವರು ಅಥವಾ ಕುಲಸಚಿವರು (ಮೌಲ್ಯಮಾಪನ) ರವರು ಮಂಡಿಸಿ ವಿವರಗಳನ್ನು ನೀಡಬೇಕಾಗುತ್ತದೆ ಮತ್ತು ಅವುಗಳಿಗೆ ಜವಾಬ್ದಾರರಾಗಬೇಕಾಗುತ್ತದೆ ಎಂದು ತಿಳಿಸಿ ಸದಸ್ಯರಾದ ಶ್ರೀ ಹೆಚ್.ಆರ್. ಸತೀಶ್ ರವರ ಅನಿಸಿಕೆಗಳನ್ನು ಗಂಭೀರವಾಗಿ ಪರಿಗಣಿಸ ಬೇಕೆಂದು ತಿಳಿಸಿದರು.<br>**ಸಿಂಡಿಕೇಟ್ ನಿರ್ಣಯ:**<br>**ಸುದೀರ್ಘ ಚರ್ಚೆಯ ನಂತರ, 3ನೇ ಕಾಮಗಾರಿ ಸಮಿತಿಯ ನಡಾವಳಿಗಳನ್ನು ಕಾಮಗಾರಿ ಸಮಿತಿಯ ಪುನರ್ ಪರಿಶೀಲನೆಗೆ ಕಳುಹಿಸಲು ತೀರ್ಮಾನಿಸಲಾಯಿತು.** |
| ವಿಷಯ ಸಂಖ್ಯೆ– 6: | To consider to hire the service of experienced retired officers in the University as Consultant.<br>ಕುಲಪತಿಗಳು ಪ್ರಸ್ತಾವನೆಯಲ್ಲಿ ತಿಳಿಸಿದಂತೆ, 3 ವರ್ಷಗಳ ವಾರ್ಷಿಕ ವರದಿಗಳನ್ನು ಸಿದ್ಧಪಡಿಸುವ ಕೆಲಸ ಕೂಡಲೇ ಆಗಬೇಕಾಗಿದೆ. ಅಲ್ಲದೇ ವಿಶ್ವವಿದ್ಯಾಲಯ ಧನ ಸಹಾಯ ಆಯೋಗಕ್ಕೆ 12(ಬಿ) ಅಡಿಯಲ್ಲಿ ಸಲ್ಲಿಸಿರುವ ಪ್ರಸ್ತಾವನೆಗೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸಬೇಕಾಗಿದೆ. ಕಾರಣ ಈ ಕೆಲಸ ನಿರ್ವಹಿಸಿದ ಅನುಭವವಿರುವ ಶ್ರೀ ಪಿ. ನಾಗರಾಜು ರವರನ್ನು ಸಮಾಲೋಚಕರಾಗಿ ವಾರದಲ್ಲಿ 2 ಅಥವಾ 3 ದಿವಸ, ಈ ಕೆಲಸ ನಿರ್ವಹಿಸಲು ಸೂಚಿಸ ಬಹುದಾಗಿದೆ ಎಂದು ತಿಳಿಸಿದರು. |

ಸದಸ್ಯರಾದ ಡಾ: ಹೆಚ್.ಟಿ. ಅರವಿಂದ್, ಶ್ರೀಮತಿ ಜ್ಯೋತಿ ವಿಜಯ್, ಚರ್ಚೆಯಲ್ಲಿ ಭಾಗವಹಿಸಿ, ಈಗಾಗಲೇ 70 ವರ್ಷಗಳ ವಯಸ್ಸು ಪೂರೈಸಿದವರನ್ನು ವಿಶ್ವವಿದ್ಯಾಲಯದ ಸೇವೆಗೆ ತೆಗೆದುಕೊಳ್ಳ ಬಾರದೆಂದು ತೀರ್ಮಾನವಾಗಿರುವುದರಿಂದ, ಈ ಕುರಿತು ಅನುಭವವಿರುವ 70 ವರ್ಷದ ಒಳಗಿನ ನಿವೃತ್ತ ಸಿಬ್ಬಂದಿಗಳ ಸೇವೆ ಪಡೆಯ ಬಹುದೆಂದು ಹೇಳಿದರು.

ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು 3 ವರ್ಷಗಳ ವಾರ್ಷಿಕ ವರದಿ ಸಿದ್ದಪಡಿಸುವದು ಅತ್ಯಂತ ಅಗತ್ಯವಾದ ಕೆಲಸ ಎಂದು ಹೇಳಿ, ತಾವು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ಸಲ್ಲಿಸಿರುವ ವಿವರವಾದ ವರದಿಯಲ್ಲಿ ವಾರ್ಷಿಕ ವರದಿಗಳನ್ನು ಸಿದ್ದಪಡಿಸುವ ಉಪಕ್ರಮದ ಬಗ್ಗೆ ವಿವರಗಳನ್ನು ಒಳಗೊಂಡಿದೆ. ಇದನ್ನು ಕರ್ನಾಟಕ ರಾಜ್ಯ ಉನ್ನತ ಶೀಕ್ಷಣ ಪರಿಷತ್ ಒಪ್ಪಿಕೊಂಡಿದ್ದು, ಅದರ ವಿದ್ಯುನ್ಮಾನ ಪ್ರತಿ (Soft copy) ತಾವು ವಿಶ್ವವಿದ್ಯಾಲಯಕ್ಕೆ ನೀಡುವುದಾಗಿ ತಿಳಿಸಿ ಅದರಂತೆ ವಾರ್ಷಿಕ ವರದಿಯನ್ನು ಸಿದ್ದಪಡಿಸ ಬೇಕೆಂದು ಹೇಳಿದರು.

ಅಗತ್ಯವಾದ ವಿವರ ಹಾಗೂ ದಾಖಲೆಗಳನ್ನು ವಿವಿಧ ವಿಭಾಗ/ಶಾಖೆಗಳಿಂದ ಪಡೆದು, ಅವುಗಳನ್ನು ಕ್ರೋಢೀಕರಿಸಿ ವಾರ್ಷಿಕ ವರದಿಯಲ್ಲಿ ಸೇರಿಸಲು ಪೂರ್ಣಾವಧಿಗೆ ನುರಿತ ಸಿಬ್ಬಂದಿಯ ಸೇವೆ ಅಗತ್ಯವಿದೆ ಎಂದು ಸದಸ್ಯರು ಅಭಿಪ್ರಾಯ ಪಟ್ಟರು.

**ಸಿಂಡಿಕೇಟ್ ನಿರ್ಣಯ:**

**ಚರ್ಚೆಯ ನಂತರ ವಾರ್ಷಿಕ ವರದಿಯ ರೂಪುರೇಷೆಗಳನ್ನು ಹಾಗೂ ಮಾದರಿಯನ್ನು ಸಿದ್ದಪಡಿಸಲು ಕೆಳಕಂಡ ಸದಸ್ಯರ ಸಮಿತಿ ರಚಿಸಲಾಯಿತು:**

1. ಶ್ರೀ ಕರಣ್ ಕುಮಾರ್ .. ಅಧ್ಯಕ್ಷರು
2. ಕುಲಸಚಿವರು .. ಸದಸ್ಯ ಕಾರ್ಯದರ್ಶಿ
3. ಕುಲಸಚಿವರು (ಮೌಲ್ಯಮಾಪನ)
4. ಡಾ.ಪಿ. ಪಾಂಡುರಂಗಪ್ಪ, ಡೀನರು, ವಿಜ್ಞಾನ ನಿಕಾಯ
5. ಡಾ.ಎನ್. ನರಸಿಂಹಮೂರ್ತಿ, ಡೀನರು, ಕಲಾ ನಿಕಾಯ
6. ಡಾ.ಎಂ. ಮುನಿರಾಜು, ಡೀನರು, ವಾಣಿಜ್ಯ ನಿಕಾಯ
7. ಡಾ.ವಿ.ಆರ್. ದೇವರಾಜು, ಸಿಂಡಿಕೇಟ್ ಸದಸ್ಯರು.

| | |
|---|---|
| | ಶ್ರೀ ಬಿ. ಈಶ್ವರಾಚಾರಿ ಹಾಗೂ ಶ್ರೀ ಅಶೋಕ್ ಕುಲಕರ್ಣಿ, ವಿಶೇಷಾಧಿಕಾರಿಗಳು ಸಮಿತಿಗೆ ಅಗತ್ಯ ಸಹಾಯವನ್ನು ನೀಡ ಬೇಕೆಂದು ಹಾಗೂ ವಾರ್ಷಿಕ ವರದಿಗಳನ್ನು ಸಿದ್ದಪಡಿಸಲು ಅಗತ್ಯವಾದ ಸಿಬ್ಬಂದಿಗಳ ಸೇವೆ ಪಡೆಯುವ ಕುರಿತು ಈ ಸಮಿತಿ ಶಿಫಾರಸ್ಸು ಮಾಡಬೇಕೆಂದು ತೀರ್ಮಾನಿಸಲಾಯಿತು. |
| ವಿಷಯ ಸಂಖ್ಯೆ– 7: | Hosting of a National Conference on "Omic Sciences; Geomics, Proteomics and Metabolomics" by the Department of Biochemistry during May/June 2020.<br><br>ರಾಷ್ಟ್ರೀಯ ಸಮ್ಮೇಳನ ಕುರಿತು ಡಾ. ವಿ. ಆರ್. ದೇವರಾಜು ರವರು ವಿವರಗಳನ್ನು ನೀಡಿ, ಜೀವರಸಾಯನ ಶಾಸ್ತ್ರ ವಿಭಾಗ 1969 ರಲ್ಲಿ ಸೆಂಟ್ರಲ್ ಕಾಲೇಜು ಆವರಣದಲ್ಲಿ ಪ್ರಾರಂಭವಾಗಿ 50 ವರ್ಷವಾಗುತ್ತಿರುವ ಸ್ವರ್ಣ ಮಹೋತ್ಸವ ಸಂದರ್ಭದಲ್ಲಿ ಈ ಸಮ್ಮೇಳನ ಆಯೋಜಿಸಿದ್ದು, ಇದರಿಂದ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಸಹಾಯವಾಗಲಿದೆ ಎಂದು ತಿಳಿಸಿದರು. ನೊಂದಣಿ ಶುಲ್ಕದ ಸ್ವೀಕೃತಿಯಲ್ಲದೆ ಬೇರೆ ಬೇರೆ ಸಂಸ್ಥೆಗಳಿಂದ ಸಹಾಯ ಪಡೆಯಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. ಸಮ್ಮೇಳನ ಜರುಗಿಸಲು ಅನುಮತಿ ನೀಡುವುದರೊಂದಿಗೆ 2.00 ಲಕ್ಷ ರೂಪಾಯಿಗಳು ಧನ ಸಹಾಯ ಬಿಡುಗಡೆ ಮಾಡಲು ಕೋರಿದರು.<br><br>**ಸಿಂಡಿಕೇಟ್ ನಿರ್ಣಯ:**<br><br>**ಚರ್ಚೆಯ ನಂತರ ರಾಷ್ಟ್ರೀಯ ಸಮ್ಮೇಳನ ಆಯೋಜಿಸಲು ಅನುಮತಿ ನೀಡಿ 2.00 ಲಕ್ಷ ರೂಪಾಯಿಗಳ ಧನ ಸಹಾಯಕ್ಕೆ ಮಂಜೂರಾತಿ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**<br><br>**ಸಮ್ಮೇಳನ ಆಯೋಜನೆಗಾಗಿ ವಿಭಾಗದ ಅಧ್ಯಕ್ಷರಾದ ಡಾ. ವಿ. ಆರ್. ದೇವರಾಜ್ ಅವರಿಗೆ ಸಭೆ ಅಭಿನಂದನೆಗಳನ್ನು ಸಲ್ಲಿಸಿತು.** |

| | |
|---|---|
| ವಿಷಯ ಸಂಖ್ಯೆ– 8: | ಕಾಲೇಜು ಕಟ್ಟಡದ ನಿರ್ಮಾಣಮಾಡುವಾಗ National Building Code(NBC) ಮಾರ್ಗಸೂಚಿಗಳನ್ನು ಪಾಲಿಸುವ ಬಗ್ಗೆ<br>ಸಿಂಡಿಕೇಟ್ ನಿರ್ಣಯ:<br>ಚರ್ಚೆಯ ನಂತರ ಸರ್ಕಾರದ ಸೂಚನೆಯಂತೆ **NBC** ಮಾರ್ಗದರ್ಶನಗಳನ್ನು ಎಲ್ಲಾ ಮಹಾವಿದ್ಯಾಲಯಗಳಿಗೆ ಸುತ್ತೋಲೆ ಮುಖಾಂತರ ಕಳಿಸಲು ಹಾಗೂ ಅವುಗಳನ್ನು ವಿಶ್ವವಿದ್ಯಾಲಯದ ಜಾಲತಾಣ (**Website**) ನಲ್ಲಿ ಪ್ರಕಟಿಸಬೇಕೆಂದು ತೀರ್ಮಾನಿಸಲಾಯಿತು |
| ವಿಷಯ ಸಂಖ್ಯೆ– 9: | ರಜಾ ಅವಧಿಯಲ್ಲಿ ಕೆಲಸ ನಿರ್ವಹಿಸಿದ ಅತಿಥಿ ಉಪನ್ಯಾಸಕರಿಗೆ ಸಂಭಾವನೆ ನೀಡುವ ಕುರಿತು ರಚಿಸಲಾದ ಸಿಂಡಿಕೇಟ್ ಸಮಿತಿಯ ನಡಾವಳಿಗಳನ್ನು ಅನುಮೋದಿಸುವ ಬಗ್ಗೆ<br>ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಈ ಅತಿಥಿ ಉಪನ್ಯಾಸಕರು ಯಾವ ನಿಯಮಗಳ ಪ್ರಕಾರ ಕೆಲಸ ಮಾಡಿರುತ್ತಾರೆ ಅವರು ನಿರ್ವಹಿಸಬೇಕಾದ ಕೆಲಸದ ವ್ಯಾಪ್ತಿ ಇತ್ಯಾದಿಗಳ ವಿವರ ಒದಗಿಸಬೇಕು ಎಂದು ತಿಳಿಸಿದರು. ಸಮಿತಿಯ ಸದಸ್ಯರಾದ ಶ್ರೀ ಆರ್.ಕೆ. ಚಂದ್ರನಾಥ್ ಹಾಗೂ ಶ್ರೀ ಹೆಚ್.ಎನ್. ಹರಿಪ್ರಸಾದ ರವರು ಸಮಿತಿ ಸಂಬಂಧಿಸಿದ ಕಡತ / ದಾಖಲೆಗಳನ್ನು ಪರಿಶೀಲಿಸಿದೆ. ಅದನ್ನು ವರದಿಯಲ್ಲಿ ನಮೂದಿಸಲಾಗಿದೆ ಎಂದು ತಿಳಿಸಿದರು.<br>ಸಿಂಡಿಕೇಟ್ ನಿರ್ಣಯ:<br>ಚರ್ಚೆಯ ನಂತರ ರಜಾ ಅವಧಿಯಲ್ಲಿ ಶೈಕ್ಷಣಿಕೇತರ ಮತ್ತು ಆಡಳಿತಾತ್ಮಕ ಕೆಲಸ ನಿರ್ವಹಿಸಿದ ಕೆಳಕಂಡ ಆರು ಜನ ಅತಿಥಿ ಉಪನ್ಯಾಸಕರಿಗೆ ಸಂಭಾವನೆ ನೀಡುವ ಕುರಿತು ರಚಿಸಲಾದ ಸಮಿತಿಯ ವರದಿಯನ್ನು ಒಪ್ಪಿಕೊಂಡು, ಸದರಿಯವರಿಗೆ ಪ್ರತಿ ತಿಂಗಳಿಗೆ ರೂ. 30,000/– ರಂತೆ ಎರಡು ತಿಂಗಳ ಅವಧಿಗೆ ಸಂಭಾವನೆ ಪಾವತಿಸಲು ಅನುಮೋದನೆ ನೀಡಲಾಯಿತು.<br>1) ಡಾ.ಬಿ.ಸಿ. ಸವಿತಾ<br>2) ಡಾ. ನಿಸರ್ಗಪ್ರಿಯಾ<br>3) ಶ್ರೀಮತಿ ಶಿಲ್ಪಾ ಎನ್<br>4) ಡಾ. ವಿ.ಎಸ್. ರೋಹಿಣಿ<br>5) ಡಾ. ಆಸ್ಮಾ ಕೌಸರ್<br>6) ಡಾ. ನಿವೇದಿತಾ<br>ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ಮೇಲಿನ ತೀರ್ಮಾನಕ್ಕೆ ತಮ್ಮ ಅಸಮ್ಮತಿ ವ್ಯಕ್ತಪಡಿಸಿದರು |

| | |
|---|---|
| ವಿಷಯ ಸಂಖ್ಯೆ– 10: | ಪರೀಕ್ಷಾ ವಿಭಾಗದಲ್ಲಿ ಅಂಕಪಟ್ಟಿಗಳನ್ನು ಮುದ್ರಿಸಲು ಸುಧಾರಿತ ಪ್ರಿಂಟರ್‌ಗಳಾದ Konica, Minolta 458 e ಪ್ರಿಂಟರ್‌ನ್ನು ಖರೀದಿಸುವ ಬಗ್ಗೆ<br>**ಸಿಂಡಿಕೇಟ್ ನಿರ್ಣಯ:**<br>**ಪರೀಕ್ಷಾ ವಿಭಾಗಕ್ಕೆ ಅಗತ್ಯವಾದ Konica, Minolta 458 e ಪ್ರಿಂಟರ್‌ನ್ನು ಸಂಬಂಧಿಸಿದ cost analysis ಮತ್ತು specification ವಿವರಗಳನ್ನು ಒಳಗೊಂಡಂತೆ ಪ್ರಸ್ತಾವನೆಯನ್ನು ಕೇಂದ್ರೀಯ ಖರೀದಿ ಸಮಿತಿ ಸಭೆಯಲ್ಲಿ ಮಂಡಿಸಿ ನಂತರ ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಬೇಕೆಂದು ಸೂಚಿಸಲಾಯಿತು.**<br>**ಅಂಕ ಪಟ್ಟಿಗಳನ್ನು ಮುದ್ರಿಸಲು ಈಗಿರುವ HP ಪ್ರಿಂಟರ್‌ಗಳಿಗೆ ಅಗತ್ಯವಾದ Catridge ಗಳನ್ನು ನಿಯಮಾವಳಿಗಳ ಪ್ರಕಾರ ಖರೀದಿಸಲು ಅನುಮತಿ ನೀಡಲಾಯಿತು.**<br>**ವಿಶ್ವವಿದ್ಯಾಲಯ GST ವಿನಾಯಿತಿ ಪಡೆಯಲು ಪ್ರಯತ್ನಿಸಬೇಕೆಂದು GST ವಿನಾಯಿತಿ ಪಡೆದಲ್ಲಿ, ಕಟ್ಟಿರುವ ತೆರಿಗೆ ಹಣ ವಿಶ್ವವಿದ್ಯಾಲಯಕ್ಕೆ ವಾಪಸ್ಸು ಸಂದಾಯವಾಗುತ್ತದೆ ಎಂದು ಶ್ರೀ ಕರಣ್‌ಕುಮಾರ್ ರವರು ನೀಡಿದ ಸಲಹೆಗೆ ಸಭೆ ಅನುಮೋದನೆ ನೀಡಿತು.** |
| ವಿಷಯ ಸಂಖ್ಯೆ– 11: | ಸ್ವಚ್ಛತಾ ಕಾರ್ಯಗಳಿಗೆ ಮೆ: ಟೋಟಲ್ ಸೆಲ್ಯೂಷನ್ಸ್, ಅವರಿಗೆ ನೀಡಿರುವ ಗುತ್ತಿಗೆ ಅವಧಿಯನ್ನು ಮುಂದುವರೆಸುವ ಬಗ್ಗೆ.<br>**ಸಿಂಡಿಕೇಟ್ ನಿರ್ಣಯ:**<br>**ಒಂದು ತಿಂಗಳಲ್ಲಿ ಟೆಂಡರ್ ಪ್ರಕ್ರಿಯೆ ಮುಗಿಸಲು ಸೂಚಿಸಿ ದಿನಾಂಕ. 31.03.2020 ರ ವರೆಗೆ ಸ್ವಚ್ಛತಾ ಸಿಬ್ಬಂದಿಗಳ ಸೇವೆ ಮುಂದುವರೆಸಲು ಅನುಮೋದನೆ ನೀಡಲಾಯಿತು** |
| ವಿಷಯ ಸಂಖ್ಯೆ– 12: | ರಸಾಯನಶಾಸ್ತ್ರ ವಿಭಾಗಕ್ಕೆ ಅಧ್ಯಾಪಕರುಗಳನ್ನು ನೇಮಿಸುವ ಬಗ್ಗೆ<br>**ಸಿಂಡಿಕೇಟ್ ನಿರ್ಣಯ: ಮುಂದೂಡಲಾಯಿತು** |
| ವಿಷಯ ಸಂಖ್ಯೆ–13 | ವಿಶ್ವವಿದ್ಯಾಲಯದಲ್ಲಿ ಆಯ್ಕೆ ಮಾಡಿರುವ ವಕೀಲರ ತಂಡದ ಪರಿಷ್ಕರಣೆ ಮಾಡುವ ಬಗ್ಗೆ<br>**ಸಿಂಡಿಕೇಟ್ ನಿರ್ಣಯ: ಮುಂದೂಡಲಾಯಿತು** |

| | |
|---|---|
| ವಿಷಯ ಸಂಖ್ಯೆ-14 | ಪರೀಕ್ಷಾ ವಿಭಾಗದಲ್ಲಿ ಸಹಾಯಕ ಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪುಟ್ಟಸ್ವಾಮಿ, ವಯೋನಿವೃತ್ತ ಅಧಿಕಾರಿ ಅವರ ಸಂಭಾವನೆ ಹೆಚ್ಚಿಸುವ ಬಗ್ಗೆ<br>**ಸಿಂಡಿಕೇಟ್ ನಿರ್ಣಯ: ಮುಂದೂಡಲಾಯಿತು** |
| ವಿಷಯ ಸಂಖ್ಯೆ-15 | ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೆಜ್‌ಮೆಂಟ್ ಸ್ಪಡೀಸ್ ಹಾಗೂ ಜಾಗತಿಕ ಭಾಷೆಗಳ ಕೇಂದ್ರದ ಸಂಯೋಜಕರನ್ನು ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡುವ ಬಗ್ಗೆ.<br>**ಸಿಂಡಿಕೇಟ್ ನಿರ್ಣಯ: ಮುಂದೂಡಲಾಯಿತು** |
| ವಿಷಯ ಸಂಖ್ಯೆ-16 | NET / SLET/ Ph.D ಇಲ್ಲದ ನಿವೃತ್ತ ಅತಿಥಿ ಉಪನ್ಯಾಸಕರಿಗೆ ಸಂಭಾವನೆ ನೀಡುವ ಬಗ್ಗೆ.<br>**ಸಿಂಡಿಕೇಟ್ ನಿರ್ಣಯ: ಮುಂದೂಡಲಾಯಿತು** |
| ವಿಷಯ ಸಂಖ್ಯೆ-17 | 2020-21 ನೇ ಸಾಲಿನ ಸಂಯೋಜನಾ ಶುಲ್ಕವನ್ನು ನಿಗದಿ ಪಡಿಸುವ ಬಗ್ಗೆ.<br>**ಸಿಂಡಿಕೇಟ್ ನಿರ್ಣಯ: ಮುಂದೂಡಲಾಯಿತು** |
| ವಿಷಯ ಸಂಖ್ಯೆ-18 | ಪರೀಕ್ಷಾ ವಿಷಯಗಳಿಗೆ ಸಂಬಂಧಿಸಿದ ಪರೀಕ್ಷಾ ಶುಲ್ಕ/ಸೇವಾ ಶುಲ್ಕಗಳನ್ನು ಬೆಂಗಳೂರು ವಿಶ್ವವಿದ್ಯಾಲಯ ನಿಗದಿಪಡಿಸಿರುವಂತೆ ಪಾವತಿ ಮಾಡುವ ಬಗ್ಗೆ<br>**ಸಿಂಡಿಕೇಟ್ ನಿರ್ಣಯ: ಮುಂದೂಡಲಾಯಿತು** |
| ವಿಷಯ ಸಂಖ್ಯೆ-19 | Approval of admissions of Charan's B.Ed College, Bengaluru for the year 2019-20 – reg.<br>**Resolution**:<br>**The Syndicate noted the facts of the case and also the Writ Petition No: 3994 / 2020 (EDN-RES) filed by Charan B.Ed College. The Syndicate resolved that in view of urgency, the Registrar shall take immediate action to file an affidavit mentioning all the details and relevant documents of the case.** |
| ವಿಷಯ ಸಂಖ್ಯೆ-20 | ಅತಿಥಿ ಉಪನ್ಯಾಸಕರಿಗೆ ರಜಾ ಅವಧಿಯಲ್ಲಿ ಸಂಭಾವನೆ ಪಾವತಿ ಮಾಡುವ ಬಗ್ಗೆ.<br>**ಸಿಂಡಿಕೇಟ್ ನಿರ್ಣಯ: ಮುಂದೂಡಲಾಯಿತು** |

| | |
|---|---|
| ವಿಷಯ ಸಂಖ್ಯೆ–21 | ವಾಣಿಜ್ಯ ವಿಭಾಗದಲ್ಲಿ International Marketing ವಿಷಯದ ಬೋಧನೆ ಮಾಡಿರುವ ಶ್ರೀ ಸಂಪತ್ ಕುಮಾರ್, ಅತಿಥಿ ಉಪನ್ಯಾಸಕರಿಗೆ ಸಂಭಾವನೆ ಪಾವತಿ ಮಾಡುವ ಬಗ್ಗೆ.<br><br>**ಸಿಂಡಿಕೇಟ್ ನಿರ್ಣಯ: ಮುಂದೂಡಲಾಯಿತು** |
| ಸಾಮಾನ್ಯ ಚರ್ಚೆ | ಡಾ. ಬಿ.ಎ. ಅನುರಾಧಾ ರವರು ಮಹಾವಿದ್ಯಾಲಯಗಳ ಸಂಯೋಜನೆ ಕುರಿತು ಸರ್ಕಾರ ನೀಡಬೇಕಾದ Online format ನ್ನು ಬೇಗ ಕಳಿಸುವಂತೆ ವಿನಂತಿಸಬೇಕೆಂದು ಪ್ರಸ್ತಾಪಿಸಿದರು. ಅದರಂತೆ, ಸರ್ಕಾರವನ್ನು ವಿನಂತಿಸಲಾಗುವುದು ಎಂದು ಕುಲಪತಿಗಳು ತಿಳಿಸಿದರು. |

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/–
ಕುಲಸಚಿವರು

ಸಹಿ/–
ಕುಲಪತಿಗಳು

ಕುಲಸಚಿವರು 7/3/2020
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ